## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 67(545) |
| 2. | ಸದಸ್ಯರ ಹೆಸರು | : | ಶ್ರೀ ಪಿ.ಆರ್. ರಮೇಶ್ (ನಾಮ ನಿರ್ದೇಶನ ಹೊಂದಿದವರು) |
| 3. | ಉತ್ತರಿಸಬೇಕಾದ ದಿನಾಂಕ | : | 21.02.2022 |
| 4. | ಉತ್ತರಿಸಬೇಕಾದ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿ ಕೊರೋನಾ ಅಥವಾ ಇತರೆ ವೈರಾಣು ರೋಗದ ಮಾದರಿಯನ್ನು ಪತ್ತೆ ಹಚ್ಚಲು (Genome Sequencing) ಸರ್ಕಾರದ ಕ್ರಮಗಳೇನು; (ವಿವರ ನೀಡುವುದು) | ರಾಜ್ಯದಲ್ಲಿ ಕೋವಿಡ್-19 ವೈರಾಣು ಹಾಗೂ ಇತರೆ ರೂಪಾಂತರಿ ವೈರಾಣು ರೋಗದ ಮಾದರಿಯನ್ನು ಪತ್ತೆ ಹಚ್ಚಲು Genome Sequencing ಪ್ರಯೋಗ ಶಾಲೆಗಳಿಗೆ ಮಾದರಿಗಳನ್ನು ಕಳುಹಿಸಲು ಅನುಕೂಲವಾಗುವ ನಿಟ್ಟಿನಲ್ಲಿ ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ 5 ಪ್ರಯೋಗ ಶಾಲೆಗಳು ಹಾಗೂ 5 Tertiary Care Hospital ಗಳು, ಅಂದರೆ ಒಟ್ಟು 10 Sentinel Sites ಮೂಲಕ Mapping ಮಾಡಿ ಮೇಲೆ ತಿಳಿಸಿರುವ INSACOG ನೆಟ್‌ವರ್ಕ್ ಅಡಿಯಲ್ಲಿನ 5 ಪ್ರಯೋಗ ಶಾಲೆಗಳಿಗೆ ಮಾದರಿಗಳನ್ನು ಕಳುಹಿಸಲಾಗುತ್ತಿದೆ. Genome Sequencingಗಾಗಿ ಮಾದರಿಗಳನ್ನು INSACOG ನೆಟ್‌ವರ್ಕ್ ಅಡಿಯಲ್ಲಿನ 5 ಪ್ರಯೋಗ ಶಾಲೆಗಳಿಗೆ ಕಳುಹಿಸುವುದು ಕಡ್ಡಾಯ ಆಗಿರುತ್ತದೆ.<br><br>Genome Sequencing ಪ್ರಯೋಗಶಾಲೆಯ ಮುಖೇನ ಕೋವಿಡ್ ವೈರಸ್‌ನ ರೂಪಾಂತರಿ ತಳಿಗಳಾದ ಅಲ್ಫಾ, ಬೀಟಾ, ಡೆಲ್ಟಾ, ಡೆಲ್ಟಾ ಪ್ಲಸ್, ಕಪ್ಪ, ಈಟಾ ಹಾಗೂ ಒಮಿಕ್ರಾನ್‌ಗಳನ್ನು ಪತ್ತೆ ಹಚ್ಚಲಾಗುತ್ತಿದೆ.<br><br>ದಿನಾಂಕ:17.02.2022ರ ವರೆಗಿನ ವರದಿಯಂತೆ ರಾಜ್ಯದಲ್ಲಿ ಈವರೆಗೆ ಅಲ್ಫಾ-156, ಬೀಟಾ-8, ಡೆಲ್ಟಾ, ಡೆಲ್ಟಾ ಪ್ಲಸ್ ಇತ್ಯಾದಿ-4430, ಕಪ್ಪ, ಈಟಾ ಹಾಗೂ ಇತರೆ-286 ಮತ್ತು ಒಮಿಕ್ರಾನ್-1115 ರೂಪಾಂತರಿಗಳು ವರದಿಯಾಗಿವೆ.<br><br>ಸದರಿ INSACOG ನೆಟ್‌ವರ್ಕ್ ಪ್ರಯೋಗ ಶಾಲೆಗಳಲ್ಲಿ ಪತ್ತೆಯಾದ ರೂಪಾಂತರಿಗಳ ಆಧಾರದ ಮೇಲೆ ಅಗತ್ಯ ಸಾರ್ವಜನಿಕ ಆರೋಗ್ಯ ಕ್ರಮಗಳನ್ನು(Public Health Actions) ಅನುಷ್ಠಾನಗೊಳಿಸಲಾಗುತ್ತಿದೆ.<br><br>ಸಮಸ್ಯಾತ್ಮಕ ದೇಶಗಳಿಂದ(Countries At – Risk) ಆಗಮಿಸುವ ಪ್ರಯಾಣಿಕರನ್ನು ವಿಮಾನ ನಿಲ್ದಾಣದಲ್ಲಿಯೇ ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡಿಸಿ, ಪಾಸಿಟಿವ್ ಫಲಿತಾಂಶ ಬಂದ ಮಾದರಿಗಳಿಗೆ Genome Sequencing ಪರೀಕ್ಷೆ ಮಾಡಲಾಗುತ್ತಿದೆ.<br><br>ಒಮಿಕ್ರಾನ್ ರೂಪಾಂತರಿ ಪ್ರಕರಣಗಳು ವರದಿಯಾದ ಹಿನ್ನೆಲೆಯಲ್ಲಿ ಭಾರತ ಸರ್ಕಾರದ ಮಾರ್ಗಸೂಚಿಯಂತೆ ಡಿಸೆಂಬರ್-2021 ಹಾಗೂ ಜನವರಿ-2022ರಲ್ಲಿ ಬೆಂಗಳೂರು ನಗರದಲ್ಲಿ ಮೆಟ್ರೋ ಸರ್ವೆಲೆನ್ಸ್ ಮೂಲಕ Genome |

Scanned with CamScanner

| | | |
|---|---|---|
| | | Sequencing ನಡೆಸಿ ಒಮಿಕ್ರಾನ್ ತಳಿಯನ್ನು ಶೀಘ್ರವಾಗಿ ಪತ್ತೆ ಹಚ್ಚುವುದರ ಮೂಲಕ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗಿರುತ್ತದೆ.<br><br>ಭಾರತ ಸರ್ಕಾರದ ಮಾರ್ಗಸೂಚಿಯಂತೆ ಪ್ರಸ್ತುತ ಫೆಬ್ರುವರಿ-2022ರಲ್ಲಿ ಸಂಭಾವ್ಯ ಹೊಸ ರೂಪಾಂತರಿಯ ಇರುವಿಕೆಯನ್ನು ಪತ್ತೆ ಹಚ್ಚುವ ನಿಟ್ಟಿನಲ್ಲಿ Genome Sequencingಗಾಗಿ Special Surveillance ಚಟುವಟಿಕೆಯನ್ನು ನಡೆಸಲಾಗುತ್ತಿದೆ.<br><br>ರಾಜ್ಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಕೋವಿಡ್-19 ವೈರಾಣು ಹಾಗೂ ಇತರೆ ರೂಪಾಂತರಿ ವೈರಾಣು ರೋಗದ ಮಾದರಿಯನ್ನು ಪತ್ತೆ ಹಚ್ಚಲು ಭಾರತ ಸರ್ಕಾರದ ಮಾರ್ಗಸೂಚಿಯಂತೆ INSACOG ನೆಟ್‌ವರ್ಕ್ ಅಡಿಯಲ್ಲಿನ 5 ಪ್ರಯೋಗ ಶಾಲೆಗಳನ್ನು ಗುರುತಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ.<br>1. NIMHANS, Bengaluru<br>2. NCBS, Bengaluru<br>3. InStem, Bengaluru<br>4. CBR- I I Sc, Bengaluru<br>5. JNCASR, Bengaluru<br><br>ರಾಜ್ಯದಲ್ಲಿ ವೈದ್ಯಕೀಯ ಸಂಸ್ಥೆಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಎಂಇಡಿ 256 ಎಂಪಿಎಸ್ 2021, ದಿನಾಂಕ:14.06.2021 ಮತ್ತು ದಿನಾಂಕ:29.01.2022 ರ ಆದೇಶದನ್ವಯ ಈ ಕೆಳಕಂಡ 4 ವೈದ್ಯಕೀಯ ಸಂಸ್ಥೆಗಳಲ್ಲಿ Genome Sequencing ಲ್ಯಾಬ್‌ಗಳನ್ನು ಬುನಾದಿಗೊಳಿಸಿರುತ್ತಾರೆ.<br>1. ಶ್ರೀ ಅಟಲ್ ಬಿಹಾರಿ ವಾಜಪೇಯಿ ಮೆಡಿಕಲ್ ಕಾಲೇಜು, ಬೆಂಗಳೂರು<br>2. ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು.<br>3. ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ.<br>4. ಗುಲ್ಬರ್ಗ ವೈದ್ಯಕೀಯ ವಿಜ್ಞಾನ ಸಂಸ್ಥೆ, ಗುಲ್ಬರ್ಗ.<br><br>ಈಗಾಗಲೇ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇಲ್ಲಿ ಒಂದು Genome Sequencing ಲ್ಯಾಬ್ ಅನ್ನು ಸ್ಥಾಪಿಸಲಾಗಿರುತ್ತದೆ. |
| ಆ) | ರಾಜ್ಯದಲ್ಲಿ ಕೊರೋನಾ ವೈರಾಣು ರೋಗದ ಮಾದರಿಯನ್ನು ಪತ್ತೆ ಹಚ್ಚಲು(Genome Sequencing) ಎಷ್ಟು ಪ್ರಯೋಗಾಲಯಗಳು (Virology Lab) ಸ್ಥಾಪಿತವಾಗಿದೆ ಮತ್ತು ಎಷ್ಟು ಕಾರ್ಯ ನಿರ್ವಹಿಸುತ್ತಿವೆ; (ವಿವರ ನೀಡುವುದು) | ರಾಜ್ಯದಲ್ಲಿ ಆರೋಗ್ಯ ಮತ್ತು ಕುಟುಂಬ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಒಟ್ಟು 10 Genome Sequencing ಲ್ಯಾಬ್‌ಗಳನ್ನು ಸ್ಥಾಪಿಸಲಾಗಿದ್ದು, ಇವುಗಳಲ್ಲಿ ಪ್ರಸ್ತುತ 08 ಪ್ರಯೋಗ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.<br><br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ರಾಜ್ಯದಲ್ಲಿ ಕೋವಿಡ್-19 ವೈರಾಣು ಹಾಗೂ ಇತರೆ ರೂಪಾಂತರಿಗಳನ್ನು ಪತ್ತೆ ಹಚ್ಚಲು ಭಾರತ ಸರ್ಕಾರದ ಮಾರ್ಗಸೂಚಿಯಂತೆ INSACOG ನೆಟ್ ವರ್ಕ್ ಅಡಿಯಲ್ಲಿನ 5 ಪ್ರಯೋಗಶಾಲೆಗಳನ್ನು ಗುರುತಿಸಲಾಗಿದ್ದು, ಎಲ್ಲಾ 5 ಪ್ರಯೋಗಶಾಲೆಗಳು ಕಾರ್ಯನಿರ್ವಹಿಸುತ್ತಿವೆ. |

Scanned with CamScanner

| | | |
|---|---|---|
| | | ರಾಜ್ಯದಲ್ಲಿ ವೈದ್ಯಕೀಯ ಸಂಸ್ಥೆಗಳಲ್ಲಿ ಕೊರೋನಾ ಅಥವಾ ಇತರೆ ವೈರಾಣು ರೋಗದ ಮಾದರಿಯನ್ನು ಪತ್ತೆ ಹಚ್ಚಲು ಈ ಕೆಳಕಂಡ ವೈದ್ಯಕೀಯ ಸಂಸ್ಥೆಗಳಲ್ಲಿ 5 Genome Sequencing ಲ್ಯಾಬ್ ಗಳನ್ನು ಸ್ಥಾಪಿಸಲಾಗಿದೆ.<br>1. ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು<br>2. ಶ್ರೀ ಅಟಲ್ ಬಿಹಾರಿ ವಾಜಪೇಯಿ ಮೆಡಿಕಲ್ ಕಾಲೇಜು, ಬೆಂಗಳೂರು<br>3. ಮೈಸೂರು ಸಂಶೋಧನಾ ಸಂಸ್ಥೆ ಮತ್ತು ಕಾಲೇಜು, ಮೈಸೂರು.<br>4. ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ.<br>5. ಗುಲ್ಬರ್ಗಾ ವೈದ್ಯಕೀಯ ವಿಜ್ಞಾನ ಸಂಸ್ಥೆ, ಗುಲ್ಬರ್ಗಾ.<br><br>ಇವುಗಳಲ್ಲಿ ಮೇಲಿನ ಕ್ರಮ ಸಂಖ್ಯೆ:1 ರಿಂದ 3ರ ಸಂಸ್ಥೆಗಳಲ್ಲಿರುವ Genome Sequencing ಲ್ಯಾಬ್‌ಗಳು ಕಾರ್ಯನಿರ್ವಹಿಸುತ್ತಿವೆ.<br><br>ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ ಹಾಗೂ ಗುಲ್ಬರ್ಗ ವೈದ್ಯಕೀಯ ವಿಜ್ಞಾನ ಸಂಸ್ಥೆ ಗುಲ್ಬರ್ಗದಲ್ಲಿ Genome Sequencing ಲ್ಯಾಬ್‌ಗಳನ್ನು ಪ್ರಾರಂಭಿಸಲು ಉಪಕರಣಗಳನ್ನು ಈಗಾಗಲೇ ಬುನಾದಿಗೊಳಿಸಲಾಗಿದ್ದು, ಕೇಂದ್ರ ಸರ್ಕಾರದಿಂದ INSACOG ಅನುಮತಿಯನ್ನು ನಿರೀಕ್ಷಿಸಲಾಗಿರುತ್ತದೆ. ಅನುಮತಿ ದೊರೆತ ಕೂಡಲೇ ಉಳಿದ ಲ್ಯಾಬ್‌ಗಳನ್ನು ಪ್ರಾರಂಭಿಸಲು ಕ್ರಮ ವಹಿಸಲಾಗುತ್ತದೆ. |
| ಇ) | ಮುಂಬರುವ ದಿನಗಳಲ್ಲಿ ಕೊರೋನಾ ಅಥವಾ ಇತರೆ ವೈರಾಣು ರೋಗದ ಮಾದರಿಯನ್ನು ಪತ್ತೆ ಹಚ್ಚಲು (Genome Sequencing) ರಾಜ್ಯದಲ್ಲಿ ವಿಭಾಗೀಯ ಮಟ್ಟದಲ್ಲಿ ಪ್ರಯೋಗಾಲಯಗಳನ್ನು (Virology Lab) ಸ್ಥಾಪಿಸಲು ಸರ್ಕಾರ ಇಚ್ಛಿಸಿದೆಯೇ; (ವಿವರ ನೀಡುವುದು) | ವೈದ್ಯಕೀಯ ಶಿಕ್ಷಣ ಇಲಾಖೆಯಡಿ ಬರುವ ಪ್ರಸ್ತುತ ವಿಭಾಗವಾರು ಅಸ್ತಿತ್ವದಲ್ಲಿರುವ ವೈದ್ಯಕೀಯ ಸಂಸ್ಥೆಗಳಲ್ಲಿ ಈಗಾಗಲೇ Genome Sequencing ಲ್ಯಾಬ್‌ಗಳನ್ನು ಬುನಾದಿಗೊಳಿಸಲಾಗಿರುತ್ತದೆ.<br><br>ಇದಲ್ಲದೇ ರಾಜ್ಯ ಸರ್ಕಾರವು ಬೆಂಗಳೂರಿನಲ್ಲಿ Metro Surveillance Unitನ್ನು ಸ್ಥಾಪಿಸಲು ಉದ್ದೇಶಿಸಿದೆ. |
| ಈ) | ಮುಂದಿನ ದಿನಗಳಲ್ಲಿ ಕೊರೋನಾ ಅಥವಾ ಇತರೆ ವೈರಾಣುವಿನ ಹೊಸ ರೂಪಾಂತರದ ಆತಂಕವನ್ನು ತಡೆಯಲು ರಾಜ್ಯ ಸರ್ಕಾರದ ಮುನ್ನೆಚ್ಚರಿಕೆಯ ಕ್ರಮಗಳೇನು? (ವಿವರ ನೀಡುವುದು) | |

**ಸಂಖ್ಯೆ:** ಎಂಇಡಿ 88 ಎಂಪಿಎಸ್ 2022

(ಡಾ: ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು.

Scanned with CamScanner